ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುಳಬಾಗಿಲು

ಸಿ.ಸಿ. ಸಂಖ್ಯೆಃ 4541 / 2023

ಸಿ.ಡಬ್ಲೂ: 1 /ಪಿ.ಡಬ್ಲೂಃ 1

ಪ್ರಮಾಣೀಕರಿಸಿದ ದಿನಾಂಕಃ09.06.2026

| | |
|---|---|
| ಹೆಸರು | ಪ್ರಶಾಂತಿ |
| ತಂದೆ/ಗಂಡನ ಹೆಸರು | ನರಸಿಂಹ |
| ವಯಸ್ಸು | 33 ವರುಷ |
| ವೃತ್ತಿ | ಗೃಹಿಣಿ |
| ವಾಸ | ಮುಳಬಾಗಿಲು |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ 2 ನನ್ನ ತಂದೆ. ಚಾಸಾ 3 ನನ್ನ ತಾಯಿ. ಚಾಸಾ 4 ರಿಂದ 7 ಗೊತ್ತು. 1 ನೇ ಆರೋಪಿ ನನ್ನ ಗಂಡ. ಎರಡು ಮತ್ತು ಆರೋಪಿತರು ನನ್ನ ಅತ್ತೆ ಮಾವ. ದಿಃ 22.02.2021 ರಂದು ಮುಳಬಾಗಿಲಿನ ಆಂಜೇನಯ ಸ್ವಾಮಿ ದೇವಸ್ಥಾನದಲ್ಲಿ ನನ್ನ ಹಾಗೂ 1 ನೇ ಆರೋಪಿ ಜೊತೆ ಮದುವೆ ಆಗಿರುತ್ತದೆ. ಆರೋಪಿತರು ನನಗೆ ವರದಕ್ಷಿಣೆ ತರುವಂತೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿಲ್ಲ. ಆರೋಪಿತರು ಆವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿಲ್ಲ. ದೂರುನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿಲ್ಲ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಮಹಜರ್ ನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮಹಜರ್ ನಿಪಿ 2 ಎಂದು ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

ನನ್ನ ಮತ್ತು ಆರೋಪಿತರ ನಡುವೆ ಸಂಸಾರಿಕ ವಿಚಾರಕ್ಕೆ ಸಂಬಂದಪಟ್ಟಂತೆ ಪೊಲೀಸ್ ಠಾಣೆಗೆ ಹೋದಾಗ ನಿಪಿ 1 ಮತ್ತು 2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಅವುಗಳನ್ನು ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಮಾನ್ಯ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

1ನೇ ಆರೋಪಿಯು ಮದುವೆ ಗಾಗಿ ನಾಲ್ಕು ಲಕ್ಷ ರೂ ಗಳನ್ನು ನನ್ನ ತಂದೆ - ತಾಯಿ ಯಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಪ್ರತಿದಿನ ಕುಡಿದು ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಹೆಚ್ಚಿನ ವರದಕ್ಷಿಣೆ ತರಬೇಕೆಂದು ಎಂದು ಪಿಡಿಸಿತ್ತಿದ್ದನು ಎಂದಂರೆ ಸರಿಯಲ್ಲ. 1ನೇ ಆರೋಪಿ ಕೆಟ್ಟ ಅಭ್ಯಾಸಕ್ಕೆ ಒಳಗಾದ ಕಾರಣ ಎರಡು ಮತ್ತು ಮೂರು ಆರೋಪಿತರು ಆತನನ್ನು ಮನೆಯಿಂದ ಓಡಿಸಿದ್ದರು ಎಂದರೆ ಸರಿಯಲ್ಲ. ನಾನು ಮನೆಗೆ ಬರುವುದಾಗಿ ಹೇಳಿದಾಗ ಆರೋಪಿತರು ವರದಕ್ಷಿಣೆ ತಂದರೆ ಮಾತ್ರ ಬಾ ಇಲ್ಲದಿದ್ದರೆ ನಿನ್ನನ್ನು ಪೆಟ್ರೋಲ್ ಹಾಕಿ ಸಾಯಿಸಿವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು 5 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ನಿಪಿ 1 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.  ನಂತರ ಪೊಲೀಸರು ನಿಪಿ 2 ರಂತೆ ಮಹಜರ್ ಜರುಗಿಸಿ ನಾನು ಹಾಜರುಪಡಿಸಿದ ಲಗ್ನಪತ್ರಿಕೆ ಹಾಗೂ ಮದುವೆ ಮತ್ತು ನಿಶ್ಚಿತಾರ್ಥದ ಭಾವಚಿತ್ರಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.  ಈಗ ನಾನು ಮತ್ತು ಆರೋಪಿತರು ಒಂದೇ ಮನೆಯಲ್ಲಿ ವಾಸವಾಗಿದ್ದೇವ ಎಂದರೆ ಸರಿ. ನಾನು ಆರೋಪಿಯೋಂದಿಗೆ ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-   ಇಲ್ಲಾ

ಮರುವಿಚಾರಣೆಃ-   ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಹರೀಶ್ ಜಿ )**
**ಪ್ರಧಾನ  ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಮುಳಬಾಗಿಲು**